ಸಾಕ್ಷಿಯನ್ನು ದಿನಾಂಕಃ 26/03/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 2 ನೇ ಎದುರುದಾರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ಹಾಕಿರುವ ಕಾಗದ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ಅಪಘಾತದ ಬಗ್ಗೆ ನಾನೇ ದೂರನ್ನು ನೀಡಿದ್ದೇನೆ. ದುರ್ಗಪ್ಪ ನನ್ನ ತಮ್ಮ. ಮೋಟರ ಸೈಕಲ ನಂ. ಕೆಎ 37/ಇಬಿ-0741 ಅಪಘಾತದ ದಿನ ದುರ್ಗಪ್ಪ ಚಲಾಯಿಸುತ್ತಿದ್ದ. ಮೋಟರ ಸೈಕಲನ ಮಾಲೀಕನ ಹೆಸರು ಮೈಲಾರಿ. ಸದರಿ ಮೋಟರ ಸೈಕಲನಲ್ಲಿ ಒಟ್ಟು 5 ಜನ ಹೋಗುತ್ತಿದ್ದೀರಿ ಎಂದರೆ ಸರಿ. ಪೊಲೀಸರು ತನಿಖೆ ಮಾಡಿ ಎರಡು ವಾಹನದ ವಿರುದ್ಧ ಚಾರ್ಜಶೀಟ್ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ವಾಹನದ ಚಾಲಕನ ಯಾವುದೇ ತಪ್ಪಿಲ್ಲ. ಕೆಎ 26/ ಎಫ್ -0196 ಈ ವಾಹನದ ಚಾಲಕನು ನಮಗೆ ಬಂದು ಹೊಡೆದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದುರ್ಗಪ್ಪನಿಗೆ ವಾಹನ ಚಾಲನೆ ಮಾಡಲು ಲೈಸನ್ಸ ಇರಲಿಲ್ಲ ಎಂದರೆ ಸರಿ. ಮಗಳಿಗೆ ವೈದ್ಯಕೀಯ ಖರ್ಚು 1 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖುಷಿ ಅಂಗನವಾಡಿಗೆ ಹೋಗುತ್ತಿದ್ದಳು. 1 ನೇ ಎದುರುದಾರರ ತಪ್ಪಿನಿಂದ ಈ ಅಪಘಾತ ಆಗಿಲ್ಲ, ಆದ್ದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಲ್ಲ , ಆದರೆ ಬೇರೆ ಇನ್ಸುರೆನ್ಸ ಕಂಪನಿಯವರು ಪರಿಹಾರ ಕೊಡಲು ಭಾದ್ಯಸ್ಥರಾಗಿದ್ದಾರೆ ಎಂದರೆ ಸಾಕ್ಷಿ ಇಬ್ಬರು ಭಾದ್ಯಸ್ಥರಾಗಿದ್ದಾರೆ ಎಂದು ಹೇಳುತ್ತಾರೆ. ದೀಲಿಪ್ ರವರು 6 ನೇ ತರಗತಿ ಓದುತ್ತಿದ್ದರು. ಅವರ ವೈದ್ಯಕೀಯ ಖರ್ಚು 2 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕವಿತಾ 2 ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಅವರ ವೈದ್ಯಕೀಯ ಖರ್ಚು ಸಹ 2 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
26.03.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**